ಇ) ಮೇಲ್ಕಂಡ ಸ್ಥಳಗಳಲ್ಲಿ ನೂತನ ಪ್ರವಾಸಿ ಮಂದಿರಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ನವರ ನಿಯಂತ್ರಣದಲ್ಲಿದೆ.

ಆ) ಇಲ್ಲ. ಉಪಯೋಗ ಸ್ಥಿತಿಯಲ್ಲಿದೆ.

ಇ) ಇಲ್ಲ.

ಶ್ರೀ ವಿಜಯಕುಮಾರ್‌ಶೆಟ್ಟಿ.— ಮಾನ್ಯ ಅಧ್ಯಕ್ಷರೇ, ಬಜ್ಪೆ ಮತ್ತು ಸುರತ್ಕಲ್‌ಗಳಲ್ಲಿರುವ ಪಿ.ಡಬ್ಲ್ಯೂ.ಡಿ ಪ್ರವಾಸಿ ಮಂದಿರಗಳು ನಾದುರಸ್ತಿಯಲ್ಲಿವೆ. ಆಲ್ಲಿ ವಿಮಾನ ನಿಲ್ದಾಣ ಇರುವುದರಿಂದ ಅದು ಟೂರಿಸಂ ಸೆಂಟರ್ ಕೂಡ ಆಗಿದೆ ಆದ್ದರಿಂದ ಈ ಪ್ರವಾಸಿ ಮಂದಿರಗಳನ್ನು ನವೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಮಾನ್ಯ ಅಧ್ಯಕ್ಷರೇ, ಈ ಪ್ರವಾಸಿ ಮಂದಿರಗಳು ಲೋಕೋಪಯೋಗಿ ಇಲಾಖೆಯ ಆಸ್ತಿಯಲ್ಲ. ಇದು ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟ ರತಕ್ಕಂಥ ಆಸ್ತಿ. ಇದರ ನಿಯಂತ್ರಣ ಮತ್ತು ಇದರ ಮೇಲ್ವಿಚಾರಣೆಯನ್ನು ಜಿಲ್ಲಾ ಪರಿಷತ್ತಿನವರು ಮಾಡ ಬೇಕಾಗಿರುವುದರಿಂದ ನಮ್ಮ ಮುಂದೆ ಈ ಪ್ರಸ್ತಾಪ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ ೭೩(೨೯) ಈ ಪ್ರಶ್ನೆಗೆ ಟೈಮ್‌ಬೇಕು ಎಂದು ತಮ್ಮಲ್ಲಿ ಅಪ್ಪಣೆಯನ್ನು ಕೇಳಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಕಳಿಸಿ ಇವತ್ತು ದಿವಸವಾಗಿದೆ. ಸರ್ಕಾರದಲ್ಲಿ ಎಲ್ಲಾ ಸಚಿವರುಗಳಿದ್ದರೂ ಉತ್ತರ ಕೊಡುವುದಕ್ಕೆ ಏನು ತೊಂದರೆ ಇದೆ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.— ಟೈಮ್ ಬೇಕೆಂದು ಕೇಳಿದ್ದಾರೆ. ಟೈಮ್ ಕೊಡೋಣ. ಪುನಃ ಈ ಪ್ರಶ್ನೆ ಬರುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ಇದು ರಾಜ್ಯ ಸರ್ಕಾರಕ್ಕೇನೂ ಸಂಬಂಧಪಟ್ಟಿಲ್ಲ. ವಿಮಾನ ನಿಲ್ದಾಣಕ್ಕೆ ಕೇಂದ್ರ ಸರ್ಕಾರದಿಂದ ಹೆಚ್ಚು ಹಣ ಬರುತ್ತದೆ. ನಾವು ರಾಜ್ಯ ಸರ್ಕಾರದಲ್ಲಿ ವಿಮಾನ ನಿಲ್ದಾಣಗಳನ್ನು ಹೆಚ್ಚು ಮಾಡುತ್ತಿಲ್ಲ. ಏತಕ್ಕಾಗಿ ಅದನ್ನು ಅಭಿವೃದ್ಧಿ ಪಡಿಸುತ್ತಿಲ್ಲ ಎನ್ನುವುದರ ಬಗ್ಗೆ ಗಮನ ಸೆಳೆಯಬೇಕು ಎಂದು ಈ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು.— ನೆಕ್ಸ್ಟ್ ವೀಕ್‌ನಲ್ಲಿ ಈ ಪ್ರಶ್ನೆಗೆ ಉತ್ತರ ಬರುತ್ತದೆ.

ಏತ ನೀರಾವರಿ ನಿಗಮಗಳು ಕೈಗೊಂಡ ಏತ ನೀರಾವರಿ ಯೋಜನೆಗಳು

೭೬೩. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಏತ ನೀರಾವರಿ ನಿಗಮವು ಯಾವಾಗ ಸ್ಥಾಪಿತವಾಯಿತು ?

ಆ) ಏತ ನೀರಾವರಿ ನಿಗಮವು ಸ್ಥಾಪಿತಗೊಂಡಾಗಿನಿಂದ ಈವರೆಗೆ ತೆಗೆದುಕೊಂಡಿರುವ ಕಾಮಗಾರಿಗಳೆಷ್ಟು ?

ಇ) ಪೂರ್ಣಗೊಂಡ ಕೆಲಸಗಳೆಷ್ಟು ? ನಡೆಯುತ್ತಿರುವ ಕೆಲಸಗಳೆಷ್ಟು ? ಹಾಗೂ ಈ ಕೆಲಸಗಳಿಗೆ ಈವರೆಗೆ ಆಗಿರುವ ಒಟ್ಟು ಖರ್ಚು ಎಷ್ಟು ?

ಈ) ನಿಗಮದಿಂದ ನೇಮಕಗೊಂಡಿರುವ ಇಂಜಿನಿಯರ್‌ಗಳ ಸಂಖ್ಯೆ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಬಿಜಾಪುರ ಹಾಗೂ ಮೈಸೂರುಗಳಲ್ಲಿ ಕೇಂದ್ರಸ್ಥಾನ ಹೊಂದಿದ ಎರಡು ಏತ ನೀರಾವರಿ ನಿಗಮಗಳನ್ನು ದಿನಾಂಕ ೨೯-೫-೧೯೮೬ರ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೬೬ ಐಎಫ್‌ವೈ ೮೬ರಲ್ಲಿ ರದ್ದುಪಡಿಸಲಾಯಿತು.

ಆ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ – ೬ ಏತ ನೀರಾವರಿ ಯೋಜನೆಗಳು

ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು – ೧೭ ಏತ ನೀರಾವರಿ ಯೋಜನೆಗಳು

೧) ಎರಡೂ ನಿಗಮಗಳಿಂದಲೂ ಯಾವ ಯೋಜನೆಗಳೂ ಪೂರ್ಣಗೊಂಡಿರುವುದಿಲ್ಲ. ಕೆಲಸ ಪ್ರಾರಂಭಿಸಲಾದ ಯೋಜನೆಗಳ ಪಟ್ಟಿ ಹಾಗೂ ಖರ್ಚು ಮಾಡಲಾದ ಹಣದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಈ)

	ಅಸಿಸ್ಟೆಂಟ್ ಇಂಜಿನಿಯರ್	ಜೂನಿಯರ್ ಇಂಜಿನಿಯರ್	ಒಟ್ಟು
ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ	೪೯	೨೧	೭೦
ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು	೫೫	೨೧	೭೬

ಅನುಬಂಧ

ಕೃಷ್ಣಾ ಹಾಗೂ ಕಾವೇರಿ ಜಲಾನಯನ ಏತ ನೀರಾವರಿ ನಿಗಮಗಳು ಕೈಗೊಂಡ ಯೋಜನೆಗಳ ಹಾಗೂ ಅವುಗಳಿಗೆ ಖರ್ಚು ಮಾಡಿದ ಹಣದ ವಿವರಗಳ ಪಟ್ಟಿ.

ಕ್ರಮ ಸಂಖ್ಯೆ	ಯೋಜನೆಯ ಹೆಸರು	ತಾಲ್ಲೂಕು	ಜಿಲ್ಲೆ	ಖರ್ಚು ಮಾಡಿದ ಹಣ ರೂ. ಪೈ
ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ				
೧	ಚಿಕ್ಕನಸಬಿ	ಬಾದಾಮಿ	ಬಿಜಾಪುರ	೯,೦೦೦-೦೦
೨	ಜಂಬಗಿ	ಮುಧೋಳ	ಬಿಜಾಪುರ	೨೩,೦೦೦-೦೦
೩	ವಾಸನ	ಹಾನಗಲ್	ಧಾರವಾಡ	ಇಲ್ಲ
೪	ಹಿಪ್ಪರಗಿ	ಜಮಖಂಡಿ	ಬಿಜಾಪುರ	ಇಲ್ಲ
೫	ಮಣ್ಣೂರ	ಅಫಜಲಪುರ	ಗುಲ್ಬರ್ಗಾ	ಇಲ್ಲ
೬	ಮೂಗಿನಗುಂದಿ	ಹರಿಹರ	ಚಿತ್ರದುರ್ಗಾ	ಇಲ್ಲ
			ಒಟ್ಟು	೩೨,೦೦೦-೦೦.
ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು.				
೧	ಕೆ. ಗೊಲ್ಲಹಳ್ಳಿ	ಬೆಂಗಳೂರು (ದಕ್ಷಿಣ)	ಬೆಂಗಳೂರು	೬೫೫,೧೮೬-೧೫
೨	ಆತಗೂರು ಮಾಚಳ್ಳಿ	ಮದ್ದೂರು	ಮಂಡ್ಯ	೭೨,೪೮೫-೯೦
೩	ಹುಲಿಕೆರೆ	ಮದ್ದೂರು	ಮಂಡ್ಯ	೬,೧೩,೦೫೦-೪೩
೪	ಕಾಡಕೊತ್ತನಹಳ್ಳಿ	ಮದ್ದೂರು	ಮಂಡ್ಯ	೨,೫೫,೬೯೯-೯೧
೫	ನಂಜಾಪುರ	ಮಳವಳ್ಳಿ	ಮಂಡ್ಯ	೧,೨೦,೭೯೦-೬೯
೬	ಮಲ್ಲಿಕ್ಕಾತನಹಳ್ಳಿ	ಮಳವಳ್ಳಿ	ಮಂಡ್ಯ	೪೯,೭೨೯-೯೫
೭	ತಲಕಾಡು	ಟಿ.ಎನ್. ಪುರ	ಮೈಸೂರು	೪,೪೧ ೩೦೨-೧೬
೮	ವೇಧಿನಿ	ಟಿ.ಎನ್. ಪುರ	ಮೈಸೂರು	೫೫. ೨೬೩-೪೦
೯	ಮಂಡುಕುತೊರೆ ೨ನೇ ಹಂತ	ಟಿ ಎನ್.ಪುರ	ಮೈಸೂರು	೫ ೨೩,೧೨೨-೪೦
೧೦	ಚಿಕ್ಕನಂದಿ	ಹೆಚ್.ಡಿ.ಕೋಟೆ	ಮೈಸೂರು	೪,೩೩,೭೮೪-೪೫
೧೧	ಬೀರಂಬಳ್ಳಿ	ಹೆಚ್.ಡಿ.ಕೋಟೆ	ಮೈಸೂರು	೫,೩೨,೪೮೧-೩೬
೧೨	ಕಾಡನೂರು	ಅರಕಲಗೂಡು	ಹಾಸನ	ಇಲ್ಲ
೧೩	ನೆಮ್ಮಾರು	ಶೃಂಗೇರಿ	ಚಿಕ್ಕಮಗಳೂರು	೧೨.೦೭ ೦೫೫-೦೦
೧೪	ಬೊಮ್ಮಲಪುರ	ಕೊಪ್ಪ	ಚಿಕ್ಕಮಗಳೂರು	೯೨,೦೩೪-೭೬
೧೫	ಬಂಡಿಗಾಡಿ	ಕೊಪ್ಪ	ಚಿಕ್ಕಮಗಳೂರು	೧,೯೯,೧೬೫-೬೦
೧೬	ಕೊಟ್ಟಗೆರೆ	ವೀರಾಜಪೇಟೆ	ಕೊಡಗು	೧,೧೮,೬೦೨-೦೦
೧೭	ಕರಪುರಗುಂಡಿ	ಬಂಟ್ವಾಳ	ದಕ್ಷಿಣಕನ್ನಡ	೫೩,೫೨೦-೦೦
			ಒಟ್ಟು	೩೮,೨೩,೩೪೬-೮೦

ಶ್ರೀ ಪೆರಿಕಲ್ ಎಂ. ಮಲ್ಲಪ್ಪ —ಮಾನ್ಯ ಸಭಾಧ್ಯಕ್ಷರೇ, ಏತ ನೀರಾವರಿ ನಿಗಮದಿಂದ ನೇಮಕ ಗೊಂಡ ಇಂಜಿನಿಯರ್‌ಗಳು ಎಷ್ಟು ಎಂಬ ಪ್ರಶ್ನೆಗೆ ಮಾನ್ಯ ಸಚಿವರು ೧೪೬ ಇಂಜಿನಿಯರ್‌ಗಳು ಇದ್ದಾರೆ ಎಂದು ಉತ್ತರ ಕೊಟ್ಟಿದ್ದಾರೆ. ಕೃಷ್ಣಾ ಲಿಫ್ಟ್ ಇರಿಗೇಷನ್ ಸ್ಕೀಮ್‌ನಲ್ಲಿ ೭೨ ಜನ ಇಂಜಿನಿಯರ್ಸ್ ಇದ್ದಾರೆ, ಕಾವೇರಿ ಲಿಫ್ಟ್ ಇರಿಗೇಷನ್ ಸ್ಕೀಮ್‌ನಲ್ಲಿ ೭೬ ಜನ ಇಂಜಿನಿಯರ್ಸ್ ಇದ್ದಾರೆ. ಒಟ್ಟು ೧೪೬ ಜನ ಇಂಜಿನಿಯರ್ಸ್ ಇದ್ದು, ಇವರುಗಳಿಗೆ ಸಂಬಳ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿ ಕೊಡುತ್ತಿದ್ದಾರೆ. ಕೃಷ್ಣಾ ಸ್ಕೀಮ್‌ನಲ್ಲಿ ನಾಲ್ಕು ವರ್ಷಗಳಿಂದ ಕೇವಲ ೩೨

ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅವರಿಗೆ ಸಂಬಳ ಹೆಚ್ಚು ಕಡಿಮೆ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಕಾವೇರಿ ಜಲಾನಯನ ನೀರಾವರಿ ನಿಗಮ, ಮೈಸೂರಿನಲ್ಲಿ ನಾಲ್ಕು ವರ್ಷಕ್ಕೆ ಸುಮಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ರೀತಿ ಇಂಜಿನಿಯರ್‌ಗಳನ್ನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ನೇಮಕ ಮಾಡಿ ಅವರ ಹತ್ತಿರ ಯಾವ ಕೆಲಸವನ್ನೂ ತೆಗೆದುಕೊಳ್ಳದೆ ಇವರನ್ನು ಅನ್ಯಾಯವಾಗಿ 'ಬಿಳಿ ಆನೆ'ಯನ್ನು ಸಾಕಿದ ತರಹ ಇಟ್ಟಿದ್ದಾರೆ. ಈ ತರಹ ಏಕೆ ಇಟ್ಟಿದ್ದಾರೆ ಎಂದು ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಎರಡೂ ನಿಗಮಗಳು ನಿರೀಕ್ಷಿತ ಮಟ್ಟದಷ್ಟು ಕೆಲಸವನ್ನು ಮಾಡಿಲ್ಲ. ಕಾರಣ ಈ ನಿಗಮಗಳಿಗೆ ಹಣವನ್ನು ಒದಗಿಸುವ ಪ್ರಯತ್ನಗಳು ಸಾಗಲಿಲ್ಲ. ಈ ನಿಗಮಗಳನ್ನು ಸ್ಥಾಪನೆ ಮಾಡಿದ ಉದ್ದೇಶ ಏನೆಂದರೆ, ರೈತರ ಪೇರು ಮತ್ತು ಸರ್ಕಾರದ ಸಹಾಯ ಧನ ಪೇರಿದ ಹಾಗೆ ಜಾಗತಿಕ ಬ್ಯಾಂಕಿನಿಂದ ಹಣವನ್ನು ಪಡೆದು ಈ ಯೋಜನೆಗಳನ್ನು ಪೂರ್ಣ ಮಾಡಬೇಕೆಂದು ಈ ನಿಗಮಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ರೈತರು ತಮ್ಮ ಪಂತಿಕೆ ಹಣವನ್ನು ಕೊಡುವುದರಲ್ಲಿ ವಿಳಂಬ ಬರಲಿಲ್ಲ. ಆ ಕಾರಣದಿಂದ ಯಾವ ಯೋಜನೆಯನ್ನೂ ತೆಗೆದುಕೊಳ್ಳಲಿಕ್ಕಾಗಲಿಲ್ಲ. ಹಾಗೆಯೇ ಅಧಿಕಾರಿಗಳು ಆ ದಿಸೆಯಲ್ಲಿ ಕೆಲಸ ಮಾಡುವುದಕ್ಕೆ ಕಷ್ಟ ಆಗಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಈ ಕಾರಣದಿಂದ ಯಾವುದೇ ನಿಗಮದಿಂದ ನಾವು ನಿರೀಕ್ಷಿತ ಫಲವನ್ನು ನೋಡಲಿಲ್ಲ. ಇಷ್ಟು ಜನ ಇಂಜಿನಿಯರ್‌ಗಳನ್ನು ನೇಮಕ ಮಾಡಿದ್ದರೂ ಸಹ ಅವರಿಗೆ ಸಾಕಷ್ಟು ಕೆಲಸ ಇಲ್ಲದೇ ಉಳಿದಿದ್ದಾರೆ, ಇದು ನಿಜವಾದ ವಿಚಾರ. ಆದರೆ ಸರ್ಕಾರದ ದೃಷ್ಟಿಕೋನ ಈಗ ಬದಲಾವಣೆ ಆಗಿದೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ರೈತರು ಕೊಡಬೇಕಾದ ಪಂತಿಕೆ ಹಣದ ಶೇಕಡ ೧೫ರಷ್ಟನ್ನು ಸರ್ಕಾರವೇ ಭರಿಸಿ ಅದರ ಮೂಲಕ ಈ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ಹಾಗೂ ಈ ಯೋಜನೆಗಳಿಗೆ ಹೊಸ ಚಾಲನೆಯನ್ನು ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನಿಗಮದ ಯೋಜನೆಗಳನ್ನು ಚುರುಕುಗೊಳಿಸುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪೆರಿಕಲ್ ಎಂ. ಪುಲ್ಲಪ್ಪ.—ಈ ೧೪೬ ಜನ ಇಂಜಿನಿಯರ್‌ಗಳಿಗೆ ಕೆಲಸ ಇಲ್ಲದೇ ಇರುವುದರಿಂದ ಅವರನ್ನು ವಿತ್ ಡ್ರಾ ಮಾಡಿ ಪಿಡಬ್ಲ್ಯೂಡಿ. ಇಲಾಖೆಗೋ ಅಥವಾ ಬೇರೆ ಯಾವುದಾದರೂ ಇಲಾಖೆಗೂ ವರ್ಗ ಮಾಡಿ ಇವರ ಸೇವೆಯನ್ನು ಪಡೆದುಕೊಂಡರೆ ಸರ್ಕಾರಕ್ಕೆ ದುಡ್ಡು ಉಳಿಯುತ್ತದೆ. ಇಂತಹ ಯೋಚನೆ ಸರ್ಕಾರಕ್ಕೆ ಏನಾದರೂ ಇದೆಯೇ? ಯಾವ ಕೆಲಸ ಇಲ್ಲದಿದ್ದರೂ ಸಹ ಅವರುಗಳನ್ನು ಅಲ್ಲೇ ಏಕೆ ಇಟ್ಟುಕೊಳ್ಳುತ್ತೀರಿ ಎಂಬ ಉದ್ದೇಶ ಅರ್ಥ ಆಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಇವರು ನಿಗಮದಿಂದ ನೇಮಕಗೊಂಡಿರುವುದರಿಂದ ಇವರನ್ನು ಪಿಡಬ್ಲ್ಯೂಡಿ. ಇಲಾಖೆಗೆ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಅವಕಾಶ ಇಲ್ಲ. ಆದ್ದರಿಂದ ನಿಗಮವನ್ನು ಹೆಚ್ಚು ಚುರುಕುಗೊಳಿಸಿ ಅಲ್ಲೇ ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಇದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಚಿವರು ಈ ಇಂಜಿನಿಯರ್ಸ್ ನಿಗಮದಿಂದ ನೇಮಕಗೊಂಡ ನೌಕರರು ಎಂದು ಹೇಳಿದ್ದಾರೆ. ಒಟ್ಟು ಇವರುಗಳ ಸಂಬಳಕ್ಕಾಗಿ ಖರ್ಚುಮಾಡಿರತಕ್ಕ ಹಣ ಎಷ್ಟು? ಇವರಿಂದ ತೆಗೆದುಕೊಂಡಿರತಕ್ಕ ಅಥವಾ ಇವರು ಮಾಡಿರತಕ್ಕ ಕೆಲಸ ಏನಾದರೂ ಇದೆಯೇ? ನಿಗಮದ ವ್ಯಾಪ್ತಿಗೆ ಹೆಚ್ಚಾಗಿ ಬರಲಿನಾಡು ಪ್ರದೇಶದಲ್ಲಿ ಏತ ನೀರಾವರಿ ಯೋಜನೆಯನ್ನು ಕೊಡಬೇಕೆಂಬ ಒತ್ತಡ ಒಂದು ಕಡೆ ಇದೆ. ಒಂದು ಕಡೆ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರನ್ನು ಬಳಸಬೇಕು ಎಂದು, ಮತ್ತೊಂದು ಕಡೆ ಬಚಾವತ್ ಅವಾರ್ಡಿನಂತೆ ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ಬೇಸಿನ್ನಿನ ನೀರನ್ನು ಬಳಸಿಬಿಡಬೇಕು ಎಂಬ ನಾದ ಇದೆ. ಆದ್ದರಿಂದ ನಿಗಮಕ್ಕೆ ಹೆಚ್ಚು ಶಕ್ತಿಯನ್ನು ತುಂಬಿ ರೈತರು ಎಲ್ಲೆಲ್ಲಿ ಏತ ನೀರಾವರಿ ಮಾಡಬೇಕು ಎಂದು ಯೋಚನೆ ಮಾಡಿದ್ದಾರೆ ಅವೆಲ್ಲವನ್ನೂ ಇದರ ವ್ಯಾಪ್ತಿಗೆ ತಂದು, ನೀರನ್ನು ಬಳಕೆ ಮಾಡಿಕೊಂಡು, ಇದನ್ನು ವಿಸ್ತರಿಸುವ ಬಗ್ಗೆ ಏನಾದರೂ ಪ್ರಯತ್ನ ಮಾಡುತ್ತೀರಾ?

೧೨.೦೦ ಮಧ್ಯಾಹ್ನ

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಒಳ್ಳೆಯ ಸಲಹೆ, ಈ ದಿಸೆಯಲ್ಲಿ ಈಗಾಗಲೇ ಸರ್ಕಾರ ಮನಸ್ಸು ಮಾಡಿದೆ ಎನ್ನುತಕ್ಕಂಥ ಮಾತನ್ನು ನಾನು ಅವರಿಗೆ ಹೇಳಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಎಷ್ಟು ಖರ್ಚಾಗಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆಗಿರತಕ್ಕ ಖರ್ಚೆಲ್ಲಾ ನಷ್ಟವಾಗಿದೆ.

ಶ್ರೀ ಡಿ. ಬಿ. ಚ್ರಂದೇಗೌಡ.—ನನ್ನ ಇನ್‌ಫರ್ಮೇಷನ್ ಪ್ರಕಾರ ಆರು ಕೊಟಿಗೂ ಮಿಕ್ಕಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ. — ಎಷ್ಟು ಖರ್ಚಾಗಿದೆ ಎಂದು ಹೇಳುವುದಕ್ಕೆ ಸ್ವಲ್ಪ ಸಮಯಬೇಕು, ತಕ್ಷಣ ಹೇಳುವುದು ಕಷ್ಟ.

ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಸ್ತ್ರೀಯರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ

೨೧೩. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರಿಗೆ ಬಸ್ಸುಗಳಲ್ಲಿ ಹೆಂಗಸರು ಪ್ರತ್ಯೇಕ ಆಸನಕ್ಕಾಗಿ ಪಡುತ್ತಿರುವ ತೊಂದರೆ ಸರ್ಕಾರ ದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹೆಂಗಸರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲು ಸರ್ಕಾರ ಯೋಚಿಸಿದೆಯೇ?

ಇ) ಹೆಂಗಸರಿಗಾಗಿ ಸಾರಿಗೆ ಸಂಸ್ಥೆ ಪ್ರತ್ಯೇಕ ಬಸ್ಸುಗಳನ್ನು ಓಡಿಸಲು ಯೋಚಿಸುವುದೇ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಹೌದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಗರ ಸಾರಿಗೆ ಬಸ್ಸುಗಳಲ್ಲಿ ನಾಲ್ಕು ಸಾಲು ಆಸನಗಳನ್ನು ಗ್ರಾಮಾಂತರ ಪ್ರದೇಶದ ಬಸ್ಸುಗಳಲ್ಲಿ ಮೂರು ಸಾಲು ಆಸನಗಳನ್ನು ಮಹಿಳೆಯರಿಗಾಗಿ ಈಗಾಗಲೆ ಮೀಸಲಿಡಲಾಗಿದೆ.

ಇ) ಹೌದು. ಬೆಂಗಳೂರು ನಗರದಲ್ಲಿ ಮಹಿಳಾ ಪ್ರಯಾಣಿಕರ ಒತ್ತಡ ಇರುವ ಕಡೆಗಳಲ್ಲಿ ಈಗಾಗಲೇ ೨೨ ಟ್ರಿಪ್ಪು ಬಸ್ಸುಗಳನ್ನು ಮಹಿಳೆಯರಿಗಾಗಿಯೇ ಪ್ರತ್ಯೇಕವಾಗಿ ಓಡಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ. ಮಾನ್ಯ ಮಂತ್ರಿಗಳು, ಒತ್ತಡ ಇರುವ ಕಡೆ ಮಹಿಳೆಯರಿಗಾಗಿ ೨೨ ಟ್ರಿಪ್ಪು ಬಸ್‌ಗಳನ್ನು ಓಡಿಸುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಬಹುಶಃ ಅನೇಕ ಬಸ್ ನಿಲ್ದಾಣಗಳಲ್ಲಿ ಸಾಲು ಸಾಲು ನಿಂತಿರತಕ್ಕ ಮಹಿಳೆಯರಿಗೆ ಬಸ್ ಇಲ್ಲದೆ ಬಹಳ ತೊಂದರೆ ಯಾಗಿರತಕ್ಕುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದೇ ಪ್ರಕಾರ ಗ್ರಾಮಾಂತರ ಪ್ರದೇಶದ ಬಸ್‌ಗಳಲ್ಲೂ ಕೂಡ ಹೆಂಗಸರಿಗೆ ಆಸನವಿಲ್ಲದೆ ಬಹಳ ತೊಂದರೆಯಾಗಿರತಕ್ಕಂಥಾದ್ದು ತಮ್ಮ ಗಮನಕ್ಕೆ ಬಂದಿದೆಯೇ ಮಂತ್ರಿ ವಿಶೇಷವಾಗಿ ಬರೀ ಮಹಿಳೆಯರಿಗೆ ಮಾತ್ರ ಬಸ್‌ಗಳನ್ನು ಓಡಿಸತಕ್ಕಂಥ ನಿರ್ಧಾರ ವನ್ನು ಸರ್ಕಾರ ಏಕೆ ಕೈಗೊಳ್ಳಬಾರದು?

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಂಗಳೂರು ನಗರದಲ್ಲಿ ೨೨ ಟ್ರಿಪ್ಪು ಬಸ್‌ಗಳನ್ನು ಮಹಿಳೆಯರಿಗಾಗಿ ಓಡಿಸುತ್ತಾ ಇದ್ದೇವೆ. ಈ ಪೀಕ್ ಅವರ್ಸ್ ಅನಿರುತ್ತದೆ ಆ ಸಂದರ್ಭದಲ್ಲೂ ಸಮೇತ ಬಸ್‌ಗಳಲ್ಲಿ ಪೂರ್ತಿಯಾಗಿ ಮಹಿಳಾ ಪ್ರಯಾಣಿಕರು ಸಿಕ್ಕುತ್ತಾ ಇಲ್ಲ. ಶ್ರೀವಾಸ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಎಲ್ಲಿಯಾದರೂ ಈ ರೀತಿ ಇದ್ದರೆ ನಾನು ಅಧಿಕಾರಿಗಳಿಗೆ ಹೇಳಿ ಪರಿಶೀಲನೆ ಮಾಡಿ ಅಗತ್ಯ ಕಂಡುಬಂದಲ್ಲಿ ಅಲ್ಲಿಗೆ ಮಹಿಳಾ ಬಸ್‌ಗಳನ್ನು ಓಡಿಸಲಿಕ್ಕೆ ಆದೇಶವನ್ನು ಕೊಡುತ್ತೇನೆ. ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಪ್ರತ್ಯೇಕವಾದ ಬಸ್‌ಗಳ ಅವಶ್ಯಕತೆ ಇರುವುದಿಲ್ಲ. ಈಗಾಗಲೇ ನಾವು ಎಷ್ಟು ಬಸ್‌ಗಳನ್ನು ಇಟ್ಟಿದ್ದೇವೆ ಅವು ಸಾಕಾಗುತ್ತದೆ ಎಂದು ಕಾಣುತ್ತದೆ. ಬಹುಶಃ ಇನ್ನೇನಾದರೂ, ಎಲ್ಲಿಯಾದರೂ ಬಸ್‌ಗಳು ಬೇಕು ಎಂದು ಹೇಳಿದರೆ ಆದನ್ನೂ ಸಮಿತಿ ಪರಿಶೀಲನೆ ಮಾಡಲಿಕ್ಕೆ ನಾನು ಆದೇಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ವಿಶೇಷವಾಗಿ ಮಹಿಳೆಯರಿಗಾಗಿ ಬಸ್‌ಗಳನ್ನು ಓಡಿಸತಕ್ಕಂಥ ನಿರ್ಧಾರವನ್ನು ಸರ್ಕಾರದವರು ಕೈಗೊಂಡಿದ್ದೀರ, ಇಲ್ಲದಿದ್ದರೆ ಏಕೆ ಕೈಗೊಳ್ಳಬಾರದು?